(ಇಂದು ದಿನಾಂಕ:05-03-2026 ರಂದು ಸಾಕ್ಷಿದಾರರನ್ನು ಕರೆಯಿಸಲಾಯಿತು, ಪ್ರಮಾಣ ವಚನ ಬೋಧಿಸಲಾಯಿತು)

**<u>ಪಾಟೀ ಸವಾಲುಃ ಎದುರುದಾರರ ಪರ ಶ್ರೀ ಯು ಕೆ ವಾಯ್ ವಕೀಲರಿಂದ.</u>**

1. ನನ್ನ ವಯಸ್ಸು 42 ವರ್ಷ. ನಗೆ 42 ವರ್ಷ ಎಂದು ತೋರಿಸಲು ನಾನು ಯಾವುದೇ ದಾಖಲೆಯನ್ನು ನೀಡಿರುವುದಿಲ್ಲ. ಮೋ.ಸೈ. ವಾಹನ ನನ್ನ ಹೆಸರಲ್ಲಿ ಇರುತ್ತದೆ. ಮೋ.ಸೈ. ವಿಮಾ ಕಂಪನಿಯವರನ್ನು ಸದರಿ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಬಳ್ಳಾರಿ-ಸಿರಗುಪ್ಪ ರಸ್ತೆ ರಾಷ್ಟ್ರೀಯ ಹೆದ್ದಾರಿ ಎಂದರೆ ಸರಿ. ಅಪಘಾತದ ದಿನ ನಾನು ಹೆಲ್ಮೆಟ್ ಧರಿಸಿರಲಿಲ್ಲ. ಸದರಿ ರಸ್ತೆಯಲ್ಲಿ ಹೋಗುವ ವಾಹನಗಳು ರಸ್ತೆ ನಿಯಮಗಳನ್ನು ಪಾಲಿಸಿಕೊಂಡು ಹೋಗುತ್ತವೆ ಮತ್ತು ಬರುತ್ತವೆ ಎಂದರೆ ಸರಿ. ನನ್ನ ಬಲಗಾಲು ಪೂರ್ಣವಾಗಿ ಮಡಿಚಲು ಬರುವುದಿಲ್ಲ, ಅರ್ಧ ಮಾತ್ರ ಮಡಿಚಲು ಬರುತ್ತದೆ. ಅಪಘಾತದ ದಿನ ನಾನು ಸಿಂಧನೂರು ಕಡೆಗೆ ಬರುತ್ತಿದೆ, ಬಸ್ ಬಳ್ಳಾರಿ ಕಡೆ ಹೋಗುತ್ತಿತ್ತು. ಮೊದಲು ನಾನು ದನ ಮೇಯಿಸುತ್ತಿದ್ದೆ. ನನಗೆ ಮೊದಲು ದನಗಳು ಇದ್ದವು. ನನಗೆ

ರೇಷನ್ ಕಾರ್ಡ್ ಇರುತ್ತದೆ. ನನ್ನ ರೇಷನ್ ಕಾರ್ಡಿನಿಂದ ನನ್ನ ಚಿಕಿತ್ಸೆ ಆಸ್ಪತ್ರೆಯಲ್ಲಿ ಉಚಿತವಾಗಿ ಆಗಿರುತ್ತದೆ, ಆದರೆ ಔಷಧಿಗಳನ್ನು ನಾನು ಹೊರಗಡೆಯಿಂದ ತೆಗೆದುಕೊಂಡಿರುತ್ತೇನೆ. ನಾನು ಔಷಧಿಗಳನ್ನು ಸರ್ಕಾರಿ ಆಸ್ಪತ್ರೆಯಲ್ಲಿ ಉಚಿತವಾಗಿ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನಾನು ವಾಹನ ಚಾಲನೆ ಮಾಡುವಾಗ ಬೇರೆ ವಾಹನಗಳು ಹೇಗೆ ಬರುತ್ತವೆ ಎಂದು ನನಗೆ ಗೊತ್ತಾಗುವುದಿಲ್ಲ. ಅಪಘಾತದ ದಿನ ನಾನು ವಾಹನದಿಂದ ಬಿದ್ದು ಅಪಘಾತ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಬಸ್ ಚಾಲಕನ ಯಾವುದೇ ತಪ್ಪು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ದನ ಮೇಯಿಸುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಶಸ್ತ್ರ ಚಿಕಿತ್ಸೆ ಆಗಿರುತ್ತದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲೀಸರು ಜೊತೆ ಶಾಮಿಲಾಗಿ ಪರಿಹಾರ ಪಡೆಯಲು ಬಸ್ ಚಾಲಕನ ಮೇಲೆ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಪರಿಹಾರ ಕೊಡಲು ಮೋ.ಸೈ. ವಿಮಾ ಕಂಪನಿಯವರೇ ಬಾದ್ಯಸ್ಥರು ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯಲು ಸುಳ್ಳು ಅಂಗನ್ಯೂನ್ಯತೆ ಪ್ರಮಾಣ ಪತ್ರವನ್ನು ಹಾಜರಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಸಲ್ಲಿಸಿದ ಆಸ್ಪತ್ರೆಯ ಬಿಲ್ಲುಗಳು ಸೃಷ್ಟಿಸಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಅರ್ಜಿಯಲ್ಲಿ ಮತ್ತು ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲ ಅಂಶಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ. ಮೋ.ಸೈ. ವಿಮಾ ಕಂಪನಿಯವರನ್ನು ಪಕ್ಷಗಾರರನ್ನಾಗಿ ಮಾಡದ ಕಾರಣ ಸದರಿ ಅರ್ಜಿ ಊರ್ಜಿತವಲ್ಲ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ವಿಚಾರಿಸಿ ನಂತರ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ,

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು,
ಸಿಂಧನೂರು